ಮೊದಲನೇ ದಿವಸದಿಂದ ಐದು ದಿವಸವಾದರೂ ಇನ್ನೂ ಹ್ಯಾಂಗ್ ಮೂಡ್ನಲ್ಲಿಯೇ ಅವರು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹ್ಯಾಂಗ್ ಮಾಡಬೇಕಾದರೆ ಏನೇನು ಅಪರಾಧ ಮಾಡಬೇಕೆಂಬುದನ್ನು ಹೇಳಿಬಿಡಿ. ಆಮೇಲೆ ಇನ್ನು ಮುಂದೆ ಆ ಶಬ್ದ ಉಪಯೋಗಿಸುವುದಿಲ್ಲ.

ಶ್ರೀ ಎಸ್.ಎಂ. ಕೃಷ್ಣ : ಧನ್ಯವಾದಗಳು.

ಈ ಕಾನೂನಿನ ಚೌಕಟ್ಟಿನಲ್ಲಿ ನಾವು ಮುಂದುವರಿಯಬೇಕಾಗುತ್ತದೆ. ಮೇಲ್ನೋಟಕ್ಕೆ ತುಂಬಾ ತಪ್ಪುಗಳು ನಡೆದಿವೆ ಎನ್ನತಕ್ಕದ್ದು ನನಗೂ ಅರ್ಥವಾಗುತ್ತದೆ. ಆದರೆ ಇದಕ್ಕೆ ಯಾವ ರೀತಿ ನಾವು ಇದನ್ನು ಸರಿಪಡಿಸಬೇಕು ಎನ್ನುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ನಾವು ಮುಂದುವರಿಯಬೇಕಾಗುತ್ತದೆ. ನಾವು ತೆಗೆದುಕೊಳ್ಳತಕ್ಕ ತೀರ್ಮಾನದಿಂದ ಇನ್ನೊಬ್ಬರು ಕೋರ್ಟಿಗೆ ಹೋಗತಕ್ಕಂಥದ್ದಕ್ಕೆ ಅವಕಾಶ ಕೊಡಬಾರದು. ಆ ದೃಷ್ಟಿಯಿಂದ ನಾನು ಕೆಲವು ಗಂಟೆಗಳ ಕಾಲವಕಾಶವನ್ನು ಕೇಳಿದ್ದೇನೆ. ಇದರಲ್ಲಿ ನಾನು ಮೊದಲೇ ಹೇಳಿದ ಹಾಗೆ ಪಕ್ಷ, ಪ್ರತಿಪಕ್ಷ, ಸರ್ಕಾರ, ವಿರೋಧ ಪ್ರಶ್ನೆ ಅಲ್ಲ, ಪರೀಕ್ಷೆಗಳು ನಿಸ್ಪಕ್ಷಪಾತವಾಗಿ ನಡೆಯಬೇಕು. ಪರೀಕ್ಷೆಗಳಿಗೆ ಮರ್ಯಾದೆ ಬರಬೇಕು. ಆದ್ದರಿಂದ, ಈ ಪರೀಕ್ಷೆ ಇಷ್ಟು ಅವ್ಯವಸ್ಥೆಯಲ್ಲಿ ನಡೆದಿರತಕ್ಕಂಥದ್ದು ಅಥವಾ ಉದ್ದೇಶಪೂರ್ವಕವಾದಂತ ಅವ್ಯವಸ್ಥೆ ಎಂದು ಹೇಳಿ ತಾವು ಏನು ಹೇಳಿದ್ದೀರಿ. ಇವೆಲ್ಲವನ್ನು ಕೂಡ ಸರ್ಕಾರ ಗಮನಿಸುತ್ತದೆ. ಆದುದರಿಂದ ಇವತ್ತು ನಾನು ಕಾನೂನು ಸಲಹೆಗಾರರ ಸಭೆ ಕರೆದು ನಾಳೆ ಪ್ರಶ್ನೋತ್ತರ ಕಾಲ ಆದಮೇಲೆ ಇದರಬಗ್ಗೆ ಸರ್ಕಾರ ಏನು ನಿಲುವು ತೆಗೆದುಕೊಳ್ಳುತ್ತದೆ ಎನ್ನುವುದನ್ನು ಸದನದ ಮುಂದೆ ಇಡುತ್ತೇನೆ.

ಜೀವನಭೀಮಾನಗರದಲ್ಲಿ ಕನ್ನಡ ಚಳುವಳಿಯ ಕಾರ್ಯಕರ್ತನ ಮೇಲೆ ಪೋಲೀಸರು ದೌರ್ಜನ್ಯ ನಡೆಸಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಇವತ್ತು ಬೆಳಿಗ್ಗೆ ಒಂದು ಗಮನಸೆಳೆಯುವ ಸೂಚನೆ ಬಗ್ಗೆ ತಮ್ಮಲ್ಲಿ ಹೇಳಿದ್ದೆ. ನಮ್ಮ ಕನ್ನಡ ಚಳುವಳಿಯ ಕಾರ್ಯಕರ್ತ ರಂಗನಾಥ್ ಎಂಬುವವನನ್ನು ವಿನಾಕಾರಣ ಬಂಧಿಸಿ ಜೀವನ ಭೀಮಾನಗರದಲ್ಲಿ ಕೈಗೆ ಬಳೆ ಹಾಕಿ, ಒದ್ದು ಬೂಟಿನಿಂದ ಹೊಡೆದು ಮೆರವಣಿಗೆ ಮಾಡಿದ್ದಾರೆ. ಈ ಪೋಲಿಸ್ ವ್ಯವಸ್ಥೆ ಎಷ್ಟು ಕುಲಗೆಟ್ಟು ಹೋಗಿದೆ ಎಂಬುದಕ್ಕೆ ನಾನು ಇದನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ನಾವೆಲ್ಲರೂ ಸಹಿ ಹಾಕಿ ತಮಗೆ ಕಳುಹಿಸಿಕೊಟ್ಟಿದ್ದೇವೆ. ನ್ಯಾಯ ಕೇಳುವುದಕ್ಕೆ ಹೋದಂಥ ನಮ್ಮ ಕಾರ್ಯಕರ್ತನಿಗೆ ಕೈಗೆ ಬಳೆ ಹಾಕಿ, ಹೊಡೆದಿದ್ದಾರೆ. ನಾನು ತಮ್ಮಲ್ಲಿ ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇನೆ. ನಮ್ಮ ವಿರೋಧಪಕ್ಷದವರೆಲ್ಲರೂ ಅದಕ್ಕೆ ಸಹಿ ಹಾಕಿ ಕಳುಹಿಸಿಕೊಟ್ಟಿದ್ದೇವೆ. ಆ ಕಾರ್ಯಕರ್ತ ಏನು ಅಪರಾಧವನ್ನು ಮಾಡಟಿದ್ದಾನೆಂಬುದನ್ನು ನಿಮ್ಮ ಅಧಿಕಾರಿಗಳು ಹೇಳಲಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕೈಗೆ ಬೇಡಿ ಹಾಕತಕ್ಕ ಪರಿಸ್ಥಿತಿ ಆದರೆ ಏನು ಹೇಳಬೇಕು? ಇದು ಬಹಳ ಅನ್ಯಾಯ.

(ಗೊಂದಲ)

ಅಧ್ಯಕ್ಷರು : ನಾಗರಾಜ್ರವರೇ ತಾವು ಬಂದು ಹೇಳಿದಿರಿ. ನಾನು ಇದನ್ನು ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ತಪ್ಪು ಮಾಡಿದ್ದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಿ. ಆದರೆ ಕೈಗೆ ಬೇಡಿ ಹಾಕುವ ಕ್ರಮ ಏತಕ್ಕೆ ತೆಗೆದುಕೊಂಡರು?

ಅಧ್ಯಕ್ಷರು : ಬೈರೇಗೌಡರೆ, ನಾಳೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗಾರಾಜ್ : ಈ ರೀತಿ ರಾಜ್ಯದಲ್ಲಿ ಪೋಲಿಸ್ ವ್ಯವಸ್ಥೆ ಇರುವುದಾದರೆ ಯಾರೂ ಕೂಡ ಬದುಕಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ನಾಳೆ ನಾನು ಇದಕ್ಕೆ ಕಾಲಾವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನಲ್ಲಾ.

ಶ್ರೀ ಕೆ. ಲಕ್ಕಣ್ಣ : 23ನೇ ತಾರೀಖು ಹೊಡೆದಿದ್ದನ್ನು ನಾವು ಕಣ್ಣಾರೆ ನೋಡಿದ್ದೇವೆ. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಅವರ ವಿರುದ್ಧ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಮಂತ್ರಿಗಳು ಇಲ್ಲೇ ಇದ್ದಾರೆ. ಇದರ ಬಗ್ಗೆ ಅವರು ಯಾವತ್ತು ಹೇಳಿಕೆಯನ್ನು ಕೊಡುತ್ತಾರೆಂಬುದನ್ನು ಹೇಳಲಿ.

ಅಧ್ಯಕ್ಷರು : ನಾಳೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳುತ್ತಿದ್ದೇನಲ್ಲಾ.

ಶ್ರೀ ಕೆ. ಲಕ್ಕಣ್ಣ : ಒಂದು ತಿಂಗಳ ಮೇಲಾಗಿದೆ. ಇನ್ನೂ ಇಲ್ಲ.

ಅಧ್ಯಕ್ಷರು : ಅವಕಾಶವನ್ನು ಮಾಡಿಕೊಡುತ್ತೇನೆಂದು ಹೇಳುತ್ತಿದ್ದೇನಲ್ಲಾ. ಕುಳಿತುಕೊಳ್ಳಿ ಪ್ರತಿಯೊಂದನ್ನೂ ಇದೇ ರೀತಿಮಾಡಿದರೆ ನಮಗೆ ಕಾಲಾವಕಾಶ ಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ನಮ್ಮ ಮನವಿ ಏನೆಂದರೆ, ಅವರಿಗೆ ವಿಚಾರ ಗೊತ್ತಿದೆ, ಗೃಹಮಂತ್ರಿಗಳು ಇಲ್ಲೇ ಕೂತಿದ್ದಾರೆ. ನಾವೆಲ್ಲರೂ ಹೋಗಿ ಅವರಿಗೆ ಮನವಿಕೊಟ್ಟು ಹೇಳಿದ್ದೇವೆ. ನಾನು ಆಸ್ಪತ್ರೆಗೆ ಹೋಗಿನೋಡಿಕೊಂಡು ಬಂದಿದ್ದೇನೆ. ಪೋಲಿಸ್ ಸ್ಟೇಷನ್ಗೆ ಹೋಗಿಬಂದಿದ್ದೇನೆ. ಆ ಪೋಲೀಸರನ್ನು ಏನೇ ಆದರೂ ಬದಲಾವಣೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅವರಿಗೆ ಕಾಂಗ್ರೆಸ್ಸ ಕೆಲವು ಮಂತ್ರಿಗಳ ಬೆಂಬಲ ಇದೆ. ಯಾವ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಪರಿಸ್ಥಿತಿ ಈ ರೀತಿ ಆದರೆ ಸಾರ್ವಜನಿಕ ಜೀವನದಲ್ಲಿ ಯಾರಾದರೂ ಬದುಕುವುದಕ್ಕೆ ಸಾಧ್ಯವೇ ಎಂಬುದನ್ನು ಕೇಳುತ್ತಿದ್ದೇನೆ. ಗೃಹಮಂತ್ರಿಗಳು ಇಲ್ಲೇ ಇದ್ದಾರೆ.

ಅಧ್ಯಕ್ಷರು : ನಾಳೆ ಇದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಾರೆ. ಈಗಲೇ ಉತ್ತರ ಹೇಳಿಸಿ ಅಂದರೆ ಕಷ್ಟವಾಗುತ್ತದೆ. ನಾಳೆ ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಅದಕ್ಕೆ ಅವರು ಉತ್ತರವನ್ನೂ ಕೂಡ ಕೊಡುತ್ತಾರೆ.

ಗಮನ ಸೆಳೆಯುವ ಸೂಚನೆ

ತುಂಗಭದ್ರಾ ಎಡದಂಡೆ ನಾಲೆ ಸತತವಾಗಿ 8 ಸಾರಿ ಬಿರುಕುಬಿಟ್ಟು ನೀರು ಬಿಡದಿರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿರುತ್ತದೆ, ಇದರ ರಿಪೇರಿಗಾಗಿ ಸರ್ಕಾರ ಇನ್ನೂ ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮೇಲ್ಕಂಡ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,

ತುಂಗಭದ್ರಾ ಎಡದಂಡೆ ನಾಲೆಯು 141 ಮೈಲಿಗಳು ಉದ್ದವಿದ್ದು, ಕಾಲುವೆಯು ಬಹಳ ಹಳೆಯ ಕಾಲುವೆಯಾಗಿದ್ದು, ಬಹಳಷ್ಟು ಸಲ ಒಡೆದು ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಮಾಡುವಲ್ಲಿ ಆಗಾಗ್ಗೆ ತೊಂದರೆಯಾಗಿರುತ್ತದೆ. ಮಾರ್ಚ್ 94 ರಿಂದ ಈಚೆಗೆ ಈ ಎಡದಂಡೆ ಕಾಲುವೆಯು ವಿವಿಧ ಚೈನೇಜ್ಗಳಲ್ಲಿ 8 ಕಡೆ ಕಾಲುವೆ ಬಿರುಕುಗೊಂಡಿದ್ದು ಈ ಭಾಗಗಳಲ್ಲಿ ಕೂಡಲೇ ದುರಸ್ಥಿ ಕಾರ್ಯ ಕೈಗೆತ್ತಿಕೊಂಡು